ವಿಷಯ:- ಹಿರೇಕೆರೂರು ತಾಲ್ಲೂಕಿನಲ್ಲಿ ವಿದ್ಯುತ್ ಉಪಕೇಂದ್ರಗಳ ಕಾಮಗಾರಿ ಕೆಲಸ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 109(127)

: ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು)

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಹಿರೇಕೆರೂರು ತಾಲ್ಲೂಕು ಹಂಸಭಾವಿ ಹಾಗೂ ಹಳ್ಳೂರು ವಿದ್ಯುತ್ ಸಬ್ ಸ್ಟೇಷನ್‌ಗಳ ಕಾಮಗಾರಿ ಯಾವ ಹಂತದಲ್ಲಿದೆ (ಪ್ರತ್ಯೇಕ ವಿವರ ನೀಡುವುದು)

ಆ) ಕಾಮಗಾರಿ ತ್ವರಿತವಾಗಿ ಮುಂದುವರೆಯದಿರಲು ಕಾರಣವೇನು?

ಇ) ಕಾಮಗಾರಿ ಪೂರ್ಣಗೊಳ್ಳಲು ಎಷ್ಟು ಅವಧಿ ಬೇಕಾಗುವುದು?

ಶ್ರೀ ಜೆ.ಹೆಚ್. ಪಟೇಲ್
(ಉಪ ಮುಖ್ಯಮಂತ್ರಿಗಳು)

ಅ) ಹಂಸಭಾವಿ ಗ್ರಾಮದಲ್ಲಿ ನಿರ್ಮಾಣ ಮಾಡುವ 33:11 ಕೆ.ವಿ. ವಿದ್ಯುತ್ ಉಪ ಕೇಂದ್ರಕ್ಕೆ ಬ್ಯಾಡಗಿಯಿಂದ 33 ಕೆ.ವಿ. ವಿದ್ಯುತ್ ಲೈನಿನ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ವಿದ್ಯುತ್ ಉಪಕೇಂದ್ರಕ್ಕೆ ಬೇಕಾಗುವ ಭೂಮಿಯನ್ನು ಇದೀಗ ವಶಪಡಿಸಿಕೊಂಡಿದ್ದು ನಿರ್ಮಾಣ ಕೈಗೆತ್ತಿಕೊಳ್ಳಲಾಗುವುದು. ಹಳ್ಳೂರ ಗ್ರಾಮದಲ್ಲಿ ಒಂದು 66:11 ಕೆ.ವಿ. ವಿದ್ಯುತ್ ಉಪಕೇಂದ್ರ ನಿರ್ಮಾಣ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಆ) ಹಂಸಭಾವಿಯಲ್ಲಿ ನಿರ್ಮಾಣ ಮಾಡುವ 33:11 ಕೆ.ವಿ. ವಿದ್ಯುತ್ ಉಪಕೇಂದ್ರಕ್ಕೆ ಭೂಮಿಯನ್ನು 16-3-95ರಂದು ಸ್ವಾಧೀನಪಡಿಸಿಕೊಂಡಿದೆ. ಆದ್ದರಿಂದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವಲ್ಲಿ ವಿಳಂಬ ಉಂಟಾಯಿತು. ಪ್ರಸ್ತುತನಿರ್ಮಾಣ ಕಾರ್ಯಕ್ಕೆ ಯಾವ ಅಡಚಣೆಯೂ ಇರುವುದಿಲ್ಲ.

ಇ) ಜೂನ್ 1996 ಅಂತ್ಯ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.